# ಬದುಕಿನ ಓರೆಕೋರೆ ಸರಿಪಡಿಸುವ ಹಾಸ್ಯ



'ಅಳುವ ಕಡಲೊಳು ತೇಲಿ ಬರುತಿದೆ ನಗೆಯ ಹಾಯಿದೋಣಿ....' ಎಂದು ಕವಿವಾಣಿ ನಮ್ಮ ಜೀವನಕ್ಕೆ ಭರವಸೆ ಕೊಟ್ಟಿದೆ. ಆದ್ದರಿಂದಲೇ ನಗೆ ಮಿಂಚಿಸಿ ಹೃದಯ ಹಗುರ ಮಾಡುವ ಹಾಸ್ಯ ಎಲ್ಲ ಭಾಷೆಗಳ ಸಾಹಿತ್ಯದ ಮುಖ್ಯ ಭಾಗವಾಗಿದೆ. ಹೊಸಗನ್ನಡದ ಹಾಸ್ಯ ಸಾಹಿತ್ಯ, ಹಲವು ಪ್ರತಿಭಾವಂತರಿಂದ ರೂಪುಗೊಂಡ ಹದಪಾಕ.

ಕಾಲ ಉರುಳಿದಂತೆ, ಹಾಸ್ಯ ಹೊಸದಾರಿಗಳನ್ನು ಹಿಡಿದಿದೆ. ಬರಹದಲ್ಲಿ, ಭಾಷಣದಲ್ಲಿ ವ್ಯಕ್ತವಾಗುತ್ತಿದ್ದ ಹಾಸ್ಯ, 'ನಗೆಹಬ್ಬ'ಗಳ ಮೂಲಕ ವೇದಿಕೆ ಏರಿತು. 'ಹಾಸ್ಯಗೋಷ್ಠಿ', 'ಹಾಸ್ಯೋತ್ಸವ' ಗಳು ಸಾಮೂಹಿಕ ಮನರಂಜನೆಯ ಮುಖ್ಯ ಕಾರ್ಯಕ್ರಮಗಳಾದವು. ಇನ್ನು ದೃಶ್ಯ ಮಾಧ್ಯಮ ವಿಸ್ತರಿಸಿ, ಟಿವಿ ಚಾನೆಲ್‌ಗಳು ಹೆಚ್ಚಿದಂತೆ ಹಾಸ್ಯದ ಪ್ರಸಾರವೂ ಹೆಚ್ಚಿತು. ವಿಸ್ತಾರ, ಪ್ರಸಾರಗಳಿಗೆ ಅನುಗುಣವಾಗಿ ಹಾಸ್ಯವನ್ನೇ ನೆಚ್ಚಿಕೊಂಡ ಕಲಾವಿದರೂ ಹೆಚ್ಚಿದರು. ಹಾಸ್ಯದ ಹೊಳೆಗೆ ಹೊಸ ನೀರು, ಹೊಸ ಸರಕು ಸೇರುತ್ತಲೇ ಇವೆ. ನವಮಾಧ್ಯಮದ ಮಾರ್ಗದಲ್ಲಂತೂ ಹಾಸ್ಯದ ಗಾಡಿಗಳು ಶರವೇಗದಲ್ಲಿ ಓಡುತ್ತಿವೆ. ಒಂದು ಟ್ವಿಟರ್ ಜೋಕಿಗೆ ಇಡೀ ಜಗತ್ತು ಗಹಗಹಿಸಿ ನಗುತ್ತದೆ. ಆದರೆ ಈ ಎಲ್ಲ ಹೊಸತರ ನಡುವೆಯೂ ಏನೋ ಹಳತು ಕಾಣುತ್ತಿದೆ.

ಒಂದು ಅರ್ಥದಲ್ಲಿ ಹಾಸ್ಯವೆನ್ನುವುದು ಬದುಕನ್ನು ಕುರಿತ ವಿಮರ್ಶೆ; ಹಾಸ್ಯದ ವಕ್ರತೆಯೇ ಬದುಕಿನ ಓರೆಕೋರೆಗಳನ್ನು ಸರಿಪಡಿಸಬೇಕು. ಆ ನಿಟ್ಟಿನಲ್ಲಿ ನೋಡುತ್ತ ಹೋದರೆ ಇಂದಿನ ಹಾಸ್ಯ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಕೊಡವಿಕೊಳ್ಳುತ್ತಿದೆಯೇ? ಲೇಡಿ ಲೇವಡಿ, ವ್ಯಕ್ತಿ ವಿಡಂಬನೆಗಳನ್ನು ಬಿಟ್ಟು ಹಾಸ್ಯ ಹೊಸತೇನನ್ನಾದರೂ ಹೇಳಬಾರದೇ!?

**–ಆರ್. ಪೂರ್ಣಿಮಾ**